6. ಶಾಲಾ ಕೊಠಡಿ ನಿರ್ಮಾಣ ಸೇರಿದಂತೆ ಹಲವಾರು ಸಿವಿಲ್ ಕಾಮಗಾರಿಗಳು
7. ಶಿಕ್ಷಕರ ತರಬೇತಿ
8. ಸಮುದಾಯ ಮುಖಂಡರ ತರಬೇತಿ
9. ಆಯ್ದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಕಂಪ್ಯೂಟರ್ ಶಿಕ್ಷಣ.
10. ಸಂಶೋಧನೆ ಮತ್ತು ಮೌಲ್ಯಮಾಪನ
11. ವಿಶೇಷ ಸಾಮರ್ಥ್ಯಗಳಿರುವ ಮಕ್ಕಳಿಗೆ ಸಮನ್ವಯ ಶಿಕ್ಷಣ
12. ಶಾಲೆಯಿಂದ ಹೊರಗಿರುವ ಮಕ್ಕಳನ್ನು ಶಾಲಾ ವ್ಯಾಪ್ತಿಗೆ ತರಲು ವಿಶೇಷ ಕಾರ್ಯಕ್ರಮಗಳು

ಈವರೆವಿಗೆ ರೂ. 24,268,99 ಲಕ್ಷಗಳನ್ನು ಖರ್ಚು ಮಾಡಲಾಗಿದೆ.

ಇ) 2001ರಿಂದ 2003ರವರೆಗೆ ಪ್ರಧಾನ ಮಂತ್ರಿ ಗ್ರಾಮೋದಯ ಯೋಜನೆಯಡಿಯಲ್ಲಿ ಪ್ರಾಥಮಿಕ ಶಿಕ್ಷಣಕ್ಕಾಗಿ ವಿವಿಧ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ಬಿಡುಗಡೆ ಮಾಡಿರುವ ಅನುದಾನ ಈ ರೀತಿ ಇದೆ:

(ರೂ.ಲಕ್ಷಗಳಲ್ಲಿ)

ಪ್ರಧಾನ ಮಂತ್ರಿ ಗ್ರಾಮೋದಯ ಯೋಜನೆ:

ಕ್ರ. ಸಂಖ್ಯೆ	ಯೋಜನೆ	2000–01	2001–02	2002–03	2003–04
1	2	3	4	5	6
1.	ಕೊಠಡಿ ನಿರ್ಮಾಣಕ್ಕೆ	371.90	246.05	495.00	247.50
2.	ದುರಸ್ಥಿಗೆ	567.47	374.78	750.35	375.00
3.	ಕುಡಿಯುವ ನೀರು ಮತ್ತು ಶೌಚಾಲಯಕ್ಕೆ	192.18	126.71	255.00	127.50
	ಒಟ್ಟು	1131.55	747.54	1500.351	750.00
ಹನ್ನೊಂದನೇ ಹಣಕಾಸು ಆಯೋಗ:					
1.	ಕೊಠಡಿ ನಿರ್ಮಾಣ	–	382.00	382.00	

ಸದರಿ ಅನುದಾನವನ್ನು ಕೇಂದ್ರ ಸರ್ಕಾರ ಉದ್ದೇಶಿಸಿರುವ ಕಾರ್ಯಕ್ರಮಗಳಿಗಾಗಿಯೇ ಬಳಸಲಾಗುತ್ತಿದೆ. ಈ ಹಣದಲ್ಲಿ ಒಟ್ಟು 753 ಕೊಠಡಿಗಳನ್ನು ನಿರ್ಮಿಸಲು ಕ್ರಮ ಕೈಗೊಳ್ಳಲಾಗಿದೆ.

ಜಿಲ್ಲಾ ಪಂಚಾಯತ್ ರಸ್ತೆಗಳ ನಿರ್ವಹಣೆಗೆ ಅನುದಾನ ಬಿಡುಗಡೆ

101 (558) : ಶ್ರೀ ಎಸ್. ಅಂಗಾರ ಎಸ್ (ಸುಳ್ಯ) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯ ಸರ್ಕಾರ 2000–2001 ರಿಂದ 2002–03ರವರೆಗೆ ಜಿಲ್ಲಾ ಪಂಚಾಯತ್ ರಸ್ತೆಗಳ ನಿರ್ವಹಣೆಗೆ ಎಷ್ಟು ಅನುದಾನವನ್ನು ಬಿಡುಗಡೆ ಮಾಡಿದೆ:

ಆ) ಬಿಡುಗಡೆ ಮಾಡಿರುವ ಅನುದಾನದಲ್ಲಿ ರಾಜ್ಯದ ಯಾವ ಯಾವ ಜಿಲ್ಲಾ ಪಂಚಾಯತ್ ರಸ್ತೆಗಳ ನಿರ್ವಹಣೆಗೆ ಎಷ್ಟೆಷ್ಟು ಅನುದಾನ ಬಿಡುಗಡೆ ಮಾಡಿದೆ; (ವಿವರವನ್ನು ವರ್ಷವಾರು ಬಿಡುಗಡೆ ಮಾಡಿದ ಅನುದಾನದ ಪೂರ್ಣ ಮಾಹಿತಿ ನೀಡುವುದು);

ಇ) ಯಾವ ಮಾನದಂಡ/ಆಧಾರದ ಮೇಲೆ ಅನುದಾನವನ್ನು ಬಿಡುಗಡೆ ಮಾಡಲಾಗುವುದು?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು): ಅ) ರಾಜ್ಯ ಸರ್ಕಾರವು ಜಿಲ್ಲಾ ಪರಿಷತ್ ರಸ್ತೆಗಳ ನಿರ್ವಹಣೆಗೆ (ಯೋಜನೇತರ ಲೆಕ್ಕ ಶೀರ್ಷಿಕೆಯಡಿಯಲ್ಲಿ) ಈ ಕೆಳಕಂಡಂತೆ ಅನುದಾನವನ್ನು 2000–2001 ರಿಂದ 2002–2003ರವರೆಗೆ ಬಿಡುಗಡೆ ಮಾಡಿದೆ.

ರೂ. ಲಕ್ಷಗಳಲ್ಲಿ

ಕ್ರ. ಸಂ.	ವರ್ಷ	ಬಿಡುಗಡೆ ಮಾಡಿದ ಅನುದಾನ
1.	2000–01	7210.84
2.	2001–02	6247.04
3.	2003–03	5661.36
	ಒಟ್ಟು	19119.24

ಆ) ಯಾವ ಯಾವ ಜಿಲ್ಲಾ ಪಂಚಾಯತಿಗಳಿಗೆ ಎಷ್ಟೆಷ್ಟು ಅನುದಾನ ಬಿಡುಗಡೆ ಮಾಡಲಾಗಿದೆಯೆಂಬ ಬಗ್ಗೆ ವರ್ಷವಾರು ವಿವರಗಳ ಅನುಬಂಧವನ್ನು ಲಗತ್ತಿಸಿದೆ.

ಇ) ಜಿಲ್ಲಾ ಪಂಚಾಯತಿಗಳ ವಾರ್ಷಿಕ ಕ್ರಿಯಾ ಯೋಜನೆ ಆಧರಿಸಿ ಅನುದಾನ ಬಿಡುಗಡೆ ಮಾಡಲಾಗುತ್ತಿದೆ.

ಅನುಬಂಧ–I

ಕ್ರಮ ಸಂಖ್ಯೆ	ಜಿಲ್ಲೆ	ಬಿಡುಗಡೆ ಮಾಡಿದ ಅನುದಾನ			
		2000–01	2001–02	2002–03	ಒಟ್ಟು
1	2	3	4	5	6
1)	ಬೆಂಗಳೂರು (ನಗರ)	521.53	144.94	180.38	846.85
2)	ಬೆಂಗಳೂರು (ಗ್ರಾ)	752.19	237.26	387.54	1376.99
3)	ಚಿತ್ರದುರ್ಗ	168.68	179.63	134.82	483.13
4)	ಕೋಲಾರ	374.79	369.39	233.44	977.62
5)	ಶಿವಮೊಗ್ಗ	351.06	332.12	317.14	1000.32
6)	ತುಮಕೂರು	363.77	362.15	394.42	1120.34
7)	ಮೈಸೂರು	395.69	374.77	186.16	956.62
8)	ಚಿಕ್ಕಮಗಳೂರು	219.40	261.61	226.74	707.75
9)	ದಕ್ಷಿಣ ಕನ್ನಡ	350.86	162.81	147.76	661.43

1	2	3	4	5	6
10)	ಹಾಸನ	274 41	308 58	264 43	847 42
11)	ಕೊಡಗು	127 51	152 07	136 78	416 36
12)	ಮಂಡ್ಯ	753 84	721 65	555 96	2031 45
13)	ಬೆಳಗಾಂ	188 90	225 20	303 94	718 04
14)	ಬಿಜಾಪುರ	147 11	175 38	115 42	437 91
15)	ಧಾರವಾಡ	106 26	126 67	122 77	355 70
16)	ಉತ್ತರ ಕನ್ನಡ	287 26	347 47	323 01	952 74
17)	ಗುಲ್ಬರ್ಗ	279 56	292 30	263 68	835 54
18)	ಬಳ್ಳಾರಿ	178 73	213 07	165 57	557 37
19)	ಬೀದರ್	123 70	123 61	99 66	346 97
20)	ರಾಯಚೂರು	138 60	129 47	167 61	435 68
21)	ದಾವಣಗೆರೆ	181 78	123 74	190 63	496 15
22)	ಚಾಮರಾಜನಗರ	115 58	133 83	99 34	348 75
23)	ಉಡುಪಿ	94 04	102 58	82 62	279 24
24)	ಬಾಗಲಕೋಟೆ	140 56	167 59	145 03	453 18
25)	ಗದಗ್	86 79	103 51	111 90	302 20
26)	ಹಾವೇರಿ	253 36	213 84	202 07	669 27
27)	ಕೊಪ್ಪಳ	234 88	166 80	102 54	504 22
	ಒಟ್ಟು	7210 84	6247 04	5661 36	19119 24

ಜಿಲ್ಲಾ ಪಂಚಾಯತಿ ರಸ್ತೆಗಳ ನಿರ್ವಹಣೆ

102 (535) ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಜಿಲ್ಲಾ ಪಂಚಾಯ್ತಿ ವ್ಯಾಪ್ತಿಯಲ್ಲಿ ರಾಜ್ಯದಲ್ಲಿ ಜಿಲ್ಲಾವಾರು ಇರುವ ರಸ್ತೆಯ ವಿಸ್ತೀರ್ಣ ಎಷ್ಟು,

ಆ) 2000–01 ನೇ ಸಾಲಿನಿಂದ ಈ ಸಾಲಿನವರೆಗೆ ಈ ರಸ್ತೆಗಳ ನಿರ್ವಹಣೆಗೆ ನಿಗದಿಯಾದ ಮತ್ತು ಬಿಡುಗಡೆಯಾದ ಹಣ ಎಷ್ಟು

ಇ) ಬಹುತೇಕ ಈ ಎಲ್ಲಾ ರಸ್ತೆಗಳು ದುಸ್ಥಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಈ) ಇದಕ್ಕೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು

ಉ) ಜಿಲ್ಲಾ ಪಂಚಾಯ್ತಿ ವ್ಯಾಪ್ತಿಯಲ್ಲಿ ತೀರ್ಥಹಳ್ಳಿ ಮತ್ತು ಹೊಸನಗರ ತಾಲ್ಲೂಕಿನಲ್ಲಿರುವ ರಸ್ತೆಯ ವಿಸ್ತೀರ್ಣ ಎಷ್ಟು 2000–01ನೇ ಸಾಲಿನಿಂದ ಇದುವರೆಗೆ ನಿರ್ವಹಣೆಗೆ ವರ್ಷವಾರು ತಾಲ್ಲೂಕುವಾರು ಬಿಡುಗಡೆಯಾದ ಹಣ ಎಷ್ಟು?